ಕೊಡಬೇಕಾಗಿತ್ತು. ಸರ್ಕಾರ ಕೃಪೆಗೋಸ್ಕರ, ಕರುಣೆಗೋಸ್ಕರ ಕೊಡಬೇಕಾಗಿಲ್ಲ. ಸರ್ಕಾರದಲ್ಲಿ ಅವತ್ತು ಶಾಂತಿ ಭಂಗವಾಗಿರುವಾಗ ಸರ್ಕಾರ ಇದಕ್ಕೆ ಹೊಣೆ. ಅವರಲ್ಲ ಹೊಣೆ. ಸರ್ಕಾರದಲ್ಲಿ ಅವರ ಕಾರು ಬರತಕ್ಕ ವ್ಯವಸ್ಥೆ ಆಗದೆ ಆ ಪರಿಸ್ಥಿತಿ ನಿರ್ಮಾಣವಾಗಿರಬೇಕಾದರೆ ಅದಕ್ಕೆ ಸರ್ಕಾರ ಕಾರಣವೇ ಹೊರತು ಬೇರೆ ಅಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಅವತ್ತು ಪೋಲೀಸರು ಒಬ್ಬರೂ ಇರಲಿಲ್ಲ. ಪೋಲೀಸ್ ಠಾಣೆಯಲ್ಲಿ ಜನರ ರಕ್ಷಣೆಗೆ ಯಾರೂ ಪೋಲೀಸರು ಇಲ್ಲದಿರುವ ಕಾರಣ ಇಂಥ ಅನಾಹುತವಾಯಿತು. ರಕ್ಷಣೆ ಇದ್ದಿದ್ದರೆ ಇಂಥ ಅನಾಹುತವಾಗುತ್ತಿರಲಿಲ್ಲ. ಇದಕ್ಕೆ ಸರ್ಕಾರವೇ ಹೊಣೆ.

ಅಧ್ಯಕ್ಷರು:- ಆದಷ್ಟು ಬೇಗ ಸೆಟಲ್ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇಲ್ಲಿ ಕೃಪೆ, ಕರುಣೆ ಪ್ರಶ್ನೆ ಉದ್ಭವವಾಗಲೂ ಇಲ್ಲ, ನಾನು ಹೇಳಲೂ ಇಲ್ಲ. ನಾನು ಇಷ್ಟೇ ಹೇಳಿದೆ, ಇವತ್ತು ಇರತಕ್ಕ ಕಾನೂನಿನ ಚೌಕಟ್ಟಿನೊಳಗೆ ಇದಕ್ಕೆ ಅವಕಾಶ ಇಲ್ಲ. ಆದುದರಿಂದ ಇದು ತಡವಾಗಿದೆ. ಆದರೂ ಇದನ್ನು ಸರ್ಕಾರ ಅಲ್ಲಗಳೆದಿಲ್ಲ. ಇದನ್ನು ಕೊಡತಕ್ಕದ್ದು ಹೇಗೆ. ಎಷ್ಟರಮಟ್ಟಿಗೆ, ಯಾವ ಸಂದರ್ಭದಲ್ಲಿ ಇದು ಆಗಿದೆ ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆಂಬ ವಿಚಾರವನ್ನು ಹೇಳಿದೆ.

5. ಕನ್ನಂಬಾಡಿ ಕಟ್ಟೆ ತುಂಬಿರುವುದರಿಂದ ಮುಖ್ಯ ಮಂತ್ರಿಗಳಿಂದ ಪೂಜೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೆ, ಕನ್ನಂಬಾಡಿ ಕಟ್ಟೆ ತುಂಬಿರತಕ್ಕದ್ದು ನಮಗೆಲ್ಲರಿಗೆ ಹರ್ಷ ತಂದಿದೆ. ನಮ್ಮ ಜಿಲ್ಲೆಯ ಜನರಿಗೆ, ರಾಜ್ಯದ ಜನರಿಗೆ ಕಾವೇರಿ ತಪ್ಪಲಿನಲ್ಲಿರತಕ್ಕ ನಮಗೆಲ್ಲರಿಗೆ ಹರ್ಷ ತಂದಿರತಕ್ಕ ವಿಚಾರ ತಮಗೂ ಸಹ ಗೊತ್ತಿರತಕ್ಕದ್ದು. ಯಾವಾಗ ಕನ್ನಂಬಾಡಿ ಕಟ್ಟೆ ತುಂಬುತ್ತದೆ ಆಗ ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಬಂದು ಪೂಜೆ ಮಾಡತಕ್ಕದ್ದು ಪ್ರತೀತಿ. ಆದ್ದರಿಂದ ಮಾನ್ಯ ಉಪಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಯಾವಾಗ ಬಂದು ಪೂಜೆ ಈಡೇರಿಸುತ್ತಾರೆಂಬುದನ್ನು ಸ್ಪಷ್ಟಪಡಿಸಬೇಕು. ಏಕೆಂದರೆ ಜಿಲ್ಲೆಯ ಎಲ್ಲ ಜನರೂ ಕಾಯುತ್ತಿದ್ದಾರೆ. ಅದರಲ್ಲೂ ಬಹುತೇಕ ಎಲ್ಲ ಶಾಸಕರು, ನಮ್ಮ ಭಾಗದವರು ಕಾಯುತ್ತಿದ್ದಾರೆ. ದಯವಿಟ್ಟು ಮಾನ್ಯ ಉಪ ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಅಲ್ಲಿ ಜನ ಹೊಡೆಯುವುದಕ್ಕೆ ಕಾಯ್ದುಕೊಂಡಿದ್ದಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಈ ಮಾತನ್ನು ಅವರು ವಾಪಸ್ಸು ತೆಗೆದು ಕೊಳ್ಳಬೇಕು. ಹೊಡೆಯುವುದಕ್ಕೆ ನಾವೆಲ್ಲ ಅಲ್ಲಿ ಇರುತ್ತೇವೆ. ಮುಖ್ಯ ಮಂತ್ರಿಗಳು ಬಂದರೆ ಹೊಡೆಯುವುದಕ್ಕೆ ಕಾಯ್ದುಕೊಂಡಿರುತ್ತಾರೆಂಬ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ-ಮುಖ್ಯ ಮಂತ್ರಿಗಳು ಬಂದರೆ ಪೂಜೆ ಮಾಡುತ್ತಾರೆ. ಸರಿಯಾಗಿ ಪೂಜೆ ಮಾಡುತ್ತಾರೆ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ಕನ್ನಂಬಾಡಿ ಕಟ್ಟೆಯಾಗಲಿ, ಹೇಮಾವತಿಯಾಗಲಿ, ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಹೇಳಿದ ಹಾಗೆ ಕೆಲವು ಕಡೆ ಪೂಜೆ ಮಾಡತಕ್ಕ ಸಂಭ್ರಮದ ವಾತಾವರಣ ಉದ್ಭವವಾಗಿದೆ ಎಂಬುದನ್ನು ಮನಗಂಡಿದ್ದೇವೆ. ಈ ಎಲ್ಲಾ ಸಂಭ್ರಮದಲ್ಲಿ ಕೆಲವರಿಗೆ ಸಂತೋಷದಿಂದ ಕಣ್ಣಲ್ಲಿ ನೀರು ಬಂದರೆ ಕೆಲವರಿಗೆ ಹೊಟ್ಟೆಕಿಚ್ಚಿನಿಂದ ಕಣ್ಣಲ್ಲಿ ನೀರು ಬರುತ್ತದೆ. ಆದ್ದರಿಂದ ಯಾರ ಕಣ್ಣಲ್ಲಿ ಯಾವ ನೀರು ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈಗ ಮದ್ರಾಸಿಗೆ ಹೋಗಿದ್ದಾರೆ. ನಾವು ಹೇಳುವುದಕ್ಕಿಂತ ಮುಂಚೆ ಹೋದರೂ ಹೋದರೆ ಅವರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಪೂಜೆ ಮಾಡಿಸುವುದರಲ್ಲಿ ಬಹಳ ಆಸಕ್ತಿ ಇದೆ, ಬಂದತಕ್ಷಣ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನನಗೆ ಒಂದು ಅನುಮಾನ ಬಂದಿದೆ. ಅವರಲ್ಲಿ ಕೆಲವರಿಗೆ ಸಂತೋಷಕ್ಕೂ ಕಣ್ಣೀರು ಬಂದಿದೆ ದುಃಖಕ್ಕೂ ಕಣ್ಣೀರು ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಬಂದು ನಮ್ಮ ಗುಲ್ಬರ್ಗ ಜಿಲ್ಲೆಯ ಶಾಸಕರಾದ ದೇವನಾಯಕ್ ಪೆಡಮಗಿಯವರು, ನಾನು ಮುಖ್ಯವಾಗಿ ಶೂನ್ಯವೇಳೆಯಲ್ಲಿ ಅತ್ಯಂತ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದೆವು. ಈಗ ಸಕ್ಕರೆ ಖಾತೆಯ ಸಚಿವರು ಇದ್ದಾರೆ. ಗುಲ್ಬರ್ಗ ಜಿಲ್ಲೆಯ ಆಳಂದ್ ಸಹಕಾರ ಸಕ್ಕರೆ ಕಾರ್ಖಾನೆಗೆ ಮಾರ್ಚ್ 1995ರಿಂದ ಯಾರು ಕಬ್ಬನ್ನು ಕೊಟ್ಟಿದ್ದಾರೆ...

ಶ್ರೀ ಎಲ್.ಆರ್.ಶಿವರಾಮೇಗೌಡ:- ಶ್ರೀಮತಿ ಪ್ರಮೀಳಾರವರು ಮುಖ್ಯ ಮಂತ್ರಿಗಳು ಬಂದರೆ ಹೊಡೆಯುತ್ತಾರೆಂದು ಹೇಳಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ದಯವಿಟ್ಟು ಅದನ್ನು ಎಕ್ಸ್‌ಪಂಜ್ ಮಾಡಿ.

ಅಧ್ಯಕ್ಷರು:- ಈಗಾಗಲೇ ಹೇಳಿದ್ದೀರಲ್ಲ. ನಾನು ರೆಕಾರ್ಡ್ ತರಿಸಿ ನೋಡುತ್ತೇನೆ. ಹೊಡೆಯಬೇಕೇ ಬೇಡವೇ ಎಂದು ನಾನು ನೋಡುತ್ತೇನೆ. ನೀವು ಹೇಳಿ ಯಡಿಯೂರಪ್ಪನವರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬಾಕಿ

+ಶ್ರೀ ಬಿ.ಎಸ್.ಯಡಿಯೂರಪ್ಪ:- ಗುಲ್ಬರ್ಗ ಜಿಲ್ಲೆಯ ಆಳಂದ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಮಾರ್ಚಿ 1995 ರಿಂದ ಯಾರು ರೈತರು ಕಬ್ಬನ್ನು ಕೊಟ್ಟಿದ್ದಾರೆ ಅವರಿಗೆ ಈವರೆಗೆ ಹಣವನ್ನು ಪಾವತಿ ಮಾಡಿಲ್ಲ. ಒಂದು ಅಂದಾಜಿನ ಪ್ರಕಾರ ಸುಮಾರು 5 ಕೋಟಿ ರೂಪಾಯಿ ಬಾಕಿ ಇದೆ ಎಂದು ನಮಗೆ ಗೊತ್ತಾಗಿದೆ. 21-8-95 ರಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ಮಾಡಿದ್ದರೂ ಯಾರೂ ಹೋಗಿ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಯತ್ನವನ್ನು ಮಾಡಿಲ್ಲ. 1-9-95 ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಅಲ್ಲಿ ಪ್ರಾರಂಭ ಮಾಡಿದ್ದಾರೆ. ದುಃಖ ತರುವಂಥ ಸಂಗತಿ ಅಂದರೆ, ಯಾವ ರೈತ ಕೊಟ್ಟಂಥ ಕಬ್ಬಿನಿಂದ ಸಕ್ಕರೆ ಮಾಡಿ ಆ ಸಕ್ಕರೆಯನ್ನು ಮಾರಿಕೊಂಡಿದ್ದಾನೆ ಆ ಸಕ್ಕರೆ ಕಾರ್ಖಾನೆ ಮಾಲೀಕ. 5 ತಿಂಗಳು ಕಳೆದಿದೆ. ಆ ದುಡ್ಡನ್ನು ಕೊಡದೇ ಇದ್ದರೆ ರೈತನ ಪರಿಸ್ಥಿತಿ ಎಲ್ಲಿಗೆ ಹೋಗಬಹುದು, ಅವನು ಏನಾಗಬಹುದು ಎನ್ನುವುದನ್ನು ಚಿಂತನೆ ಮಾಡದೆ ಇವತ್ತು ಧರಣಿ, ಉಪವಾಸ ಆಗುತ್ತಿದ್ದರೂ ಸಹ ಸರ್ಕಾರ ಹೋಗಿಲ್ಲ. ಆ ಕಾರ್ಖಾನೆಯವರು ಬಂದಿಲ್ಲ. ಅಂದರೆ ಯಾವರೀತಿ ರೈತ ಒಂದು